**ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು**
**ಸರ್ವಸದಸ್ಯರ ಸಭೆಯ ನಡಾವಳಿ.**

ದಿನಾಂಕ 18/02/2020 ರಂದು ಬೆಂಗಳೂರಿನ ಅಂತರಂಗದಲ್ಲಿ ನಡೆದ ಕರ್ನಾಟಕ ನಾಟಕ ಅಕಾಡೆಮಿಯ ಸರ್ವ ಸದಸ್ಯರ ಸಭೆಯ ನಡಾವಳಿ.

**ಉಪಸ್ಥಿತರು:** ಸರ್ವಶ್ರೀ / ಶ್ರೀಮತಿ

| | | |
|---|---|---|
| 1. | ಪ್ರೊ. ಭೀಮಸೇನ.ಆರ್. | ಅಧ್ಯಕ್ಷರು, ಕ.ನಾ.ಅ |
| 2. | ಎಮ್.ಕೆ.ಮಠ | ಸದಸ್ಯರು, ಕ.ನಾ.ಅ |
| 3. | ಪ್ರೇಮಾ ಬಾದಾಮಿ | ಸದಸ್ಯರು , ಕ.ನಾ.ಅ |
| 4. | ಪ್ರಭುದೇವ ಕಪ್ಪಗಲ್ಲು | ಸದಸ್ಯರು, ಕ.ನಾ.ಅ |
| 5. | ಶಿವಪ್ಪ ಭರಮಪ್ಪ ಅದರಗುಂಚಿ | ಸದಸ್ಯರು, ಕ.ನಾ.ಅ |
| 6. | ಎಂ.ಎಸ್.ಗುಣಶೀಲನ್ | ಸದಸ್ಯರು, ಕ.ನಾ.ಅ |
| 7. | ಟಿ.ಸದಾಶಿವಯ್ಯ | ಸದಸ್ಯರು, ಕ.ನಾ.ಅ |
| 8. | ಹೆಚ್.ಎಂ.ನಾಗರಾಜರಾವ್ | ಸದಸ್ಯರು, ಕ.ನಾ.ಅ |
| 9. | ಯಶವಂತ ಸರದೇಶ ಪಾಂಡೆ | ಸದಸ್ಯರು, ಕ.ನಾ.ಅ |
| 10. | ವೈಜನಾಥ್ ಬಿರಾದಾರ | ಸದಸ್ಯರು, ಕ.ನಾ.ಅ |
| 11. | ವಿನೋದ ಅಂಬೇಕರ್ | ಸದಸ್ಯರು, ಕ.ನಾ.ಅ |
| 12. | ಟಿ.ರಾಜಾರಾವ್ | ಸದಸ್ಯರು, ಕ.ನಾ.ಅ |
| 13. | ಶ್ರೀಮತಿ ರಾಧಾ ಕೊಡಗು | ಸದಸ್ಯರು, ಕ.ನಾ.ಅ |
| 14. | ಶ್ರೀ ಪ್ರವೀಣ ಗಜಾನನ ರಾಥೋಡ್, | ಸದಸ್ಯರು, ಕ.ನಾ.ಅ |
| 15. | ಶ್ರೀ ರವೀಂದ್ರ ಅರಳಗುಪ್ಪೆ, | ಸದಸ್ಯರು, ಕ.ನಾ.ಅ |
| 16. | ಬಲವಂತರಾವ್ ಪಾಟೀಲ್ | ಜಂಟಿ ನಿರ್ದೇಶಕರು, ಕ.ಸಂ.ಇ |
| 17. | ಡಾ.ಶೈಲಜಾ ಎ.ಸಿ | ರಿಜಿಸ್ಟ್ರಾರ್,ಕ.ನಾ.ಅ |

**ಅನುಪಸ್ಥಿತರು**

| | | |
|---|---|---|
| 1. | ಕೆ.ಆರ್.ಪ್ರಕಾಶ್ | ಸದಸ್ಯರು, ಕ.ನಾ.ಅ |
| 2. | ಜೆ.ಜೋಸೆಫ್ | ಸದಸ್ಯರು, ಕ.ನಾ.ಅ |
| 3. | ಕಲ್ಲೇಶಪ್ಪ. ಜಿ | ಅರ್ಥ ಸದಸ್ಯರು ಕ.ಸಂ.ಇ |

----

ಹಾಜರಿದ್ದ, ಸರ್ವರನ್ನು ಅಕಾಡೆಮಿ ರಿಜಿಸ್ಟ್ರಾರ್, ಡಾ.ಶೈಲಜಾ ಎ.ಸಿ. ಅವರು ಸ್ವಾಗತಿಸಿ, ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ಪ್ರೊ.ಭೀಮಸೇನ್.ಆರ್ ಅವರು ವಹಿಸಿಕೊಂಡು ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು.

**ಕಾರ್ಯಸೂಚಿ:**

**ಸಹಸದಸ್ಯರ ಸ್ವಾಗತ ಮತ್ತು ಜಿಲ್ಲೆಗಳ ಹಂಚಿಕೆ**

ಮೊದಲಿಗೆ ಕರ್ನಾಟಕ ನಾಟಕ ಅಕಾಡೆಮಿಗೆ ಸಹಸದಸ್ಯರಾಗಿ ಆಯ್ಕೆಯಾಗಿರುವ ಶ್ರೀಮತಿ ರಾಧಾ ಕೊಡಗು, ಶ್ರೀ ಪ್ರವೀಣ ಗಜಾನನ ರಾಥೋಡ್ ಮತ್ತು ಶ್ರೀ ರವೀಂದ್ರ ಅರಳಗುಪ್ಪೆ ಅವರುಗಳನ್ನು ಸಭೆಯು ಸ್ವಾಗತಿಸಿತು ಮತ್ತು ಈ ಮೊದಲು ಸದಸ್ಯರಿಗೆ ಹಂಚಿಕೆ ಮಾಡಲಾಗಿದ್ದ ಜಿಲ್ಲೆಗಳನ್ನು ಮರುವಿಂಗಡಿಸಲಾಯಿತು.

**ಮಾರ್ಚ್ 27ರಂದು ವಿಶ್ವರಂಗಭೂಮಿ ದಿನಾಚರಣೆ – ಬೆಂಗಳೂರು ಕಾರ್ಯಕ್ರಮದ ರೂಪುರೇಷೆ ಮತ್ತು 29 ಜಿಲ್ಲೆಗಳಲ್ಲಿ**

ರಂಗಗೌರವ, ರಂಗಗೀತೆಗಳ ಕಾರ್ಯಕ್ರಮವನ್ನು ಒಳಗೊಂಡ ವಿಶ್ವರಂಗಭೂಮಿ ದಿನಾಚರಣೆಯನ್ನು ಎಲ್ಲಾ ಜಿಲ್ಲೆಗಳಲ್ಲಿಯೂ (ಜಿಲ್ಲಾ ಕೇಂದ್ರ ಸ್ಥಾನ ಅಥವಾ ಜಿಲ್ಲೆಯ ಯಾವುದಾದರೂ ಒಂದು ತಾಲ್ಲೂಕಿನಲ್ಲಿ) ಏಕಕಾಲಕ್ಕೆ ಏರ್ಪಡಿಸಿ, ಹಾಗೆಯೇ, ಈ ಸಮಯದಲ್ಲಿ ವಿಶ್ವರಂಗಭೂಮಿಯ ಸಂದೇಶವನ್ನು ಮಂಡಿಸಲು ಮತ್ತು ಸದಸ್ಯರುಗಳು ಆಯಾ ಜಿಲ್ಲೆಗೆ ಸಂಬಂಧಪಟ್ಟ ಸದಸ್ಯರು ಸೂಚಿಸುವ ಸಂಸ್ಥೆಯ ಕೋರಿಕಾ ಪತ್ರವನ್ನು ಅಕಾಡೆಮಿಗೆ ಫೆಬ್ರವರಿ 28ರೊಳಗಾಗಿ ತಲುಪುವಂತೆ ಕ್ರಮವಹಿಸಲು ಮತ್ತು ತಮ್ಮ ಕೇಂದ್ರದ ಆಯ್ದ ಸಂಸ್ಥೆಗೆ ವಿಶ್ವರಂಗಭೂಮಿ ದಿನಾಚರಣೆಯನ್ನು ನಿರ್ವಹಿಸಲು ಸಭೆ ನಿರ್ಧರಿಸಿತು. ಪ್ರತಿ ಕಾರ್ಯಕ್ರಮಕ್ಕೂ ಆಯಾ ಜಿಲ್ಲೆಗಳ ಸಂಸ್ಥೆಗಳಿಗೆ ನಿರ್ವಹಣಾ ವೆಚ್ಚವಾಗಿ ರೂ.20,000/-ಗಳನ್ನು ಆರ್.ಟಿ.ಜಿ.ಎಸ್. ಮೂಲಕ ಕೊಡಮಾಡಲಾಗುತ್ತದೆ. ಸದಸ್ಯರು ಕಾರ್ಯಕ್ರಮ ರೂಪಿಸಬೇಕಾದ ಜಿಲ್ಲೆಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ನೀಡಲಾಗಿದೆ.

1. ಶ್ರೀ ಎಂ.ಕೆ.ಮಠ – ಮಂಗಳೂರು, ಉಡುಪಿ,
2. ಶ್ರೀಮತಿ ಪ್ರೇಮಾ ಬಾದಾಮಿ – ಬೆಂಗಳೂರು ನಗರ
3. ಶ್ರೀ ಪ್ರಭುದೇವ ಕಪ್ಪಗಲ್ಲು – ರಾಯಚೂರು, ಯಾದಗಿರಿ, ಚಿಕ್ಕಬಳ್ಳಾಪುರ
4. ಶ್ರೀ ವಿನೋದ ಅಂಬೇಕರ್ – ಬೆಳಗಾಂ, ಬಾಗಲಕೋಟೆ
5. ಶ್ರೀ ಶಿವಪ್ಪ ಭರಮಪ್ಪ ಅದರಗುಂಚಿ – ಧಾರವಾಡ, ಹಾವೇರಿ
6. ಶ್ರೀ ಜೋಸೆಫ್ – ರಾಮನಗರ, ಮಂಡ್ಯ
7. ಶ್ರೀ ಎಂ.ಎಸ್.ಗುಣಶೀಲನ್ – ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ,
8. ಶ್ರೀ ಕೆ.ಆರ್.ಪ್ರಕಾಶ್ – ಉತ್ತರ ಕನ್ನಡ, ಶಿವಮೊಗ್ಗ
9. ಶ್ರೀ ಟಿ.ಎಸ್.ಸದಾಶಿವಯ್ಯ – ತುಮಕೂರು, ಚಿತ್ರದುರ್ಗ
10. ಶ್ರೀ ನಾಗರಾಜರಾವ್ ಕಲ್ಕಟ್ಟೆ – ಚಿಕ್ಕಮಗಳೂರು, ಹಾಸನ
11. ಶ್ರೀ ಯಶವಂತ ಸರದೇಶಪಾಂಡೆ – ವಿಜಯಪುರ, ಗದಗ,
12. ಶ್ರೀ ವೈಜನಾಥ್ ಬಿರಾದಾರ್ – ಬೀದರ್,
13. ಶ್ರೀ ಟಿ.ರಾಜಾರಾವ್ – ಬಳ್ಳಾರಿ, ಕೊಪ್ಪಳ
14. ಶ್ರೀಮತಿ ರಾಧಾ ಕೊಡಗು – ಮೈಸೂರು, ಚಾಮರಾಜನಗರ,ಮಡಿಕೇರಿ,
15. ಶ್ರೀ ಪ್ರವೀಣ ಗಜಾನನ ರಾಥೋಡ್ – ಕಲಬುರಗಿ
16. ಶ್ರೀ ರವೀಂದ್ರ ಅರಳಗುಪ್ಪೆ, – ದಾವಣಗೆರೆ

**2018 ಪುಸ್ತಕ ಬಹುಮಾನದ ಆಯ್ಕೆ**

ರಂಗಭೂಮಿ ಸಂಬಂಧಿಸಿದ ಮತ್ತು ಷರತ್ತುಗಳನ್ನು ಪೂರೈಸಿದ 6 ಕೃತಿಗಳನ್ನು ಪುಸ್ತಕ ಬಹುಮಾನದ ಆಯ್ಕೆಗಾಗಿ ಸ್ಥಾಯಿಸಮಿತಿ ಸಭೆಯ ತೀರ್ಮಾನದಂತೆ, ತೀರ್ಪುಗಾರರಾದ ಶ್ರೀ ಚಂದ್ರಶೇಖರ ವಸ್ತ್ರದ, ಗದಗ ಮತ್ತು ಡಾ.ನಿರ್ಮಲ ಎಲಿಗಾರ, ಬೆಂಗಳೂರು ಹಾಗೂ ಶ್ರೀ ಟಿ.ಎಂ.ಸತೀಶ್, ಬೆಂಗಳೂರು ಇವರುಗಳಿಗೆ ಕಳುಹಿಸಲಾಗಿತ್ತು. ಅವರುಗಳು ನೀಡಿದ ತೀರ್ಪಿಗೆ ಅನುಸಾರವಾಗಿ ಶ್ರೀ ಗವೀಶ್ ಹಿರೇಮಠ ಅವರು ಬರೆದಿರುವ ಕುಮಾರ ಕೃಪಾಪೋಷಿತ ಪಂಡಿತ ಪಂಚಾಕ್ಷರ ಗವಾಯಿಗಳ ನಾಟ್ಯ ಸಂಘ ಪುಸ್ತಕಕ್ಕೆ ಹೆಚ್ಚಿನ ಅಂಕಗಳು ಬಂದಿದ್ದು, 2018ನೇ ಪುಸ್ತಕ ಬಹುಮಾನಕ್ಕೆ ಈ ಪುಸ್ತಕವನ್ನು ಆಯ್ಕೆ ಮಾಡಲಾಯಿತು. ಲೇಖಕರಾದ ಶ್ರೀ ಗವೀಶ್ ಹಿರೇಮಠ ಅವರಿಗೆ ರೂ.25,000/- ಗೌರವ ಸಂಭಾವನೆ, ಶಾಲು, ಹಾರ, ನೆನಪಿನ ಕಾಣಿಕೆ ನೀಡಲು ಸಭೆ ಅನುಮತಿಸಿತು.

**ಪ್ರಶಸ್ತಿ ಪ್ರದಾನ ಸಮಾರಂಭದ ಬಗ್ಗೆ – ಸ್ಥಳ, ದಿನಾಂಕ, ಉದ್ಘಾಟಕರು, ಅತಿಥಿಗಳು, ಪ್ರಶಸ್ತಿ ಪ್ರದಾನ ಮಾಡುವವರು, ವಿವಿಧ ಸಮಿತಿಗಳು**

ಬೀದರ್, ಮಂಗಳೂರು, ತುಮಕೂರು, ಚಿತ್ರದುರ್ಗ ಮತ್ತು ವಿಜಯಪುರ, ಹಾವೇರಿ, ದಾವಣಗೆರೆ ಜಿಲ್ಲೆಗಳಲ್ಲಿ ನಾಟಕ ಅಕಾಡೆಮಿಯ ಪ್ರಶಸ್ತಿ ಸಮಾರಂಭ ನಡೆಸುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಇಲಾಖಾ ಸಚಿವರೊಡನೆ ಸಮಾಲೋಚಿಸಿ, ಸ್ಥಳ ಮತ್ತು ದಿನಾಂಕವನ್ನು ನಿಗದಿಪಡಿಸಲು ಸಭೆ ತೀರ್ಮಾನಿಸಿತು.

**ವೃತ್ತಿಕಂಪನಿ ನಾಟಕೋತ್ಸವ ಮತ್ತು ವಿಕಲಚೇತನರ ರಂಗತರಬೇತಿ ಶಿಬಿರ**

ಸದಸ್ಯರಾದ ಶ್ರೀಮತಿ ಪ್ರೇಮಾ ಬಾದಾಮಿ ಅವರ ಸಂಚಾಲಕತ್ವದಲ್ಲಿ ಕಲಬುರುಗಿ ಜಿಲ್ಲೆಯ ಶ್ರೀ ಕುಮಾರೇಶ್ವರ ರಂಗಮಂದಿರದಲ್ಲಿ 2020 ಮಾರ್ಚ್ 4, 5 ಮತ್ತು 6 ರಂದು ಕೆಳಕಂಡ ಮೂರು ವೃತ್ತಿರಂಗಭೂಮಿ ಕಂಪನಿಗಳಿಂದ ನಾಟಕೋತ್ಸವವನ್ನು ರೂ.5ಲಕ್ಷ ಮೊತ್ತದಲ್ಲಿ ತಂಡಗಳಿಗೆ ಸಾರಿಗೆ ಮತ್ತು ಸಂಭಾವನೆ ಸೇರಿದಂತೆ ತಲಾ ಒಟ್ಟು ರೂ.55,000/- ನೀಡಲು ತೀರ್ಮಾನಿಸಲಾಯಿತು.

1. ಶ್ರೀ ಗುರುಕುಮಾರೇಶ್ವರ ನಾಟ್ಯಸಂಘ, ಹಾನಗಲ್
2. ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ, ಮೈಂದರ್ಗಿ, ಅಕ್ಕಲಕೋಟೆ
3. ಶ್ರೀ ಕುಮಾರೇಶ್ವರ ಕೃಪಾಪೋಷಿತ ಪಂಡಿತ ಪಂಚಾಕ್ಷರ ಗವಾಯಿಗಳವರ ನಾಟ್ಯಸಂಘ, ಗದಗ ಜಿಲ್ಲೆ

ಮತ್ತು ರೂ.1ಲಕ್ಷದಲ್ಲಿ ವಿಕಲಚೇತನರ ರಂಗತರಬೇತಿ ಶಿಬಿರವನ್ನು ಪ್ರೇಮಾ ಬಾದಾಮಿ ಅವರ ಸಂಚಾಲಕತ್ವದಲ್ಲಿ ಏರ್ಪಡಿಸಲು ಸಭೆ ಅನುಮತಿಸಿತು.

**ಹೊರರಾಜ್ಯ ನಾಟಕೋತ್ಸವದ ರೂಪುರೇಷೆ ಮತ್ತು ತಂಡಗಳ ವಿವರ – ನಾಗಪುರ**

ಸದಸ್ಯರಾದ ಶ್ರೀ ಯಶವಂತ ಸರದೇಶಪಾಂಡೆ ಅವರ ಸಂಚಾಲಕತ್ವದಲ್ಲಿ ನಾಗಪುರದಲ್ಲಿ ಹೊರರಾಜ್ಯ ನಾಟಕೋತ್ಸವವನ್ನು ಏರ್ಪಡಿಸಲು ಸಭೆ ಅನುಮತಿಸಿತು. ಸರದೇಶಪಾಂಡೆಯವರು ಈ ಬಗ್ಗೆ ರೂಪುರೇಷೆ ತಂಡಗಳನ್ನು ಅಂತಿಮಗೊಳಿಸಿ, ಅಧ್ಯಕ್ಷರ ಜೊತೆ ಚರ್ಚಿಸಿ, ಅಂತಿಮಗೊಳಿಸಲು ಸಭೆ ಸಮ್ಮತಿಸಿತು.

**ನಾಟ್ಯಶಾಸ್ತ್ರದ ಅಂತಿಮ ಕರಡು ಪರಿಶೀಲನೆ**

ಈ ವಿಷಯದ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸಿ, ತೀರ್ಮಾನಿಸಲು ಸಭೆ ನಿರ್ಧರಿಸಿತು.

**ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು**

ಇದುವರೆಗೂ ದಿನಾಂಕ 01-01-2020 ರಿಂದ 10-01-2020ರವರೆಗೆ ಸದಸ್ಯರಾದ ಶ್ರೀ ಯಶವಂತ ಸರದೇಶಪಾಂಡೆ ಅವರ ಸಂಚಾಲಕತ್ವದಲ್ಲಿ ದಾವಣಗೆರೆಯಲ್ಲಿ ವಿಶೇಷಘಟಕ ಯೋಜನೆಯಡಿ 20 ಅಭ್ಯರ್ಥಿಗಳನ್ನೊಳಗೊಂಡ 10 ದಿನಗಳ ರಂಗತರಬೇತಿ ಕಾರ್ಯಾಗಾರ ಮತ್ತು ದಿನಾಂಕ 20-01-2020 ರಿಂದ ದಿನಾಂಕ 29-01-2020 ರವರೆಗೆ ಸದಸ್ಯರಾದ ಶ್ರೀ ಟಿ.ರಾಜಾರಾವ್ ಅವರ ಸಂಚಾಲಕತ್ವದಲ್ಲಿ ಗಿರಿಜನ ಉಪಯೋಜನೆಯಡಿ 10 ಅಭ್ಯರ್ಥಿಗಳನ್ನೊಳಗೊಂಡ 10 ದಿನಗಳ ರಂಗತರಬೇತಿ ಕಾರ್ಯಾಗಾರ ಮತ್ತು ದಿನಾಂಕ 02-02-2020 ರಿಂದ 8-02-2020ರವರೆಗೆ ಸದಸ್ಯರಾದ ಶ್ರೀ ಎಂ.ಕೆ.ಮಠ ಅವರ ಸಂಚಾಲಕತ್ವದಲ್ಲಿ 20 ಅಭ್ಯರ್ಥಿಗಳನ್ನೊಳಗೊಂಡ 8 ದಿನಗಳ ರಂಗತರಬೇತಿ ಕಾರ್ಯಾಗಾರಗಳು ಮತ್ತು ದಿನಾಂಕ 25-01-2020 ರಿಂದ 28-01-2020ರವರೆಗೆ ಸದಸ್ಯರಾದ ಶ್ರೀ ಕೆ.ಆರ್.ಪ್ರಕಾಶ್ ಅವರ ಸಂಚಾಲಕತ್ವದಲ್ಲಿ ಸಿದ್ಧಾಪುರದಲ್ಲಿ ನಾಲ್ಕು ದಿನಗಳ ಹವ್ಯಾಸಿ ನಾಟಕೋತ್ಸವ ಮತ್ತು ದಿನಾಂಕ 26-01-2020 ರಂದ ದಿನಾಂಕ 28-01-2020 ರವರೆಗೆ ಸದಸ್ಯರಾದ ಶ್ರೀ ಶಿವಪ್ಪ ಭರಮಪ್ಪ ಅದರಗುಂಚಿ ಅವರ ಸಂಚಾಲಕತ್ವದಲ್ಲಿ ಮೂರು ದಿನಗಳ ಪೌರಾಣಿಕ ನಾಟಕೋತ್ಸವ ಹಾಗೂ ದಿನಾಂಕ 8-02-2020 ರಿಂದ 10-02-2020 ರವರೆಗೆ ಸದಸ್ಯರಾದ ಶ್ರೀ ಎಂ.ಎಸ್.ಗುಣಶೀಲನ್ ಅವರ ಸಂಚಾಲಕತ್ವದಲ್ಲಿ ಹೈದ್ರಬಾದ್‌ನ ಸಾಹಿತ್ಯ ಮಂದಿರ, ಕಾಚಿಗೂಡದಲ್ಲಿ ಮೂರು ದಿನಗಳ ಹೊರರಾಜ್ಯ ನಾಟಕೋತ್ಸವ ಮತ್ತು ದಿನಾಂಕ 12-2-2020 ರಂದು ಮತ್ತು ದಿನಾಂಕ 15-2-2020 ರಿಂದ 17-2-2020 ರವರೆಗೆ ಸದಸ್ಯರಾದ ಶ್ರೀ ಹೆಚ್.ಎಂ.ನಾಗರಾಜರಾವ್ ಅವರ ಸಂಚಾಲಕತ್ವದಲ್ಲಿ ಚಿಕ್ಕಮಗಳೂರಿನಲ್ಲಿ ಗಾಂಧಿ-150 ಹಾಗೂ ಶೃಂಗೇರಿಯಲ್ಲಿ ವೃತ್ತಿರಂಗಭೂಮಿ ನಾಟಕೋತ್ಸವಗಳು ಯಶಸ್ವಿಯಾಗಿ ನಡೆದಿರುವುದರ ಬಗ್ಗೆ ಹಾಗೂ ಈ ಸಂಬಂಧ ಬಂದ ಸಾಧಕ ಮತ್ತು ಭಾಧಕ ಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

- ಸಂಸ್ಥೆಯ ವಹಿವಾಟು ವರ್ಷದಲ್ಲಿ 40ಲಕ್ಷ ಮೀರುವುದಿಲ್ಲವೆಂದು ನಿಗದಿತ ಫಾರಂನಲ್ಲಿ ಘೋಷಿಸಿಕೊಂಡಲ್ಲಿ ಆ ಸಂಸ್ಥೆಯು ಜಿ.ಎಸ್.ಟಿ ಬಿಲ್ಲನ್ನು ನೀಡುವ ಸಂದರ್ಭ ಬರುವುದಿಲ್ಲವೆಂಬ ಅಂಶವನ್ನು ಜಂಟಿ ನಿರ್ದೇಶಕರು ಸಭೆಯ ಗಮನಕ್ಕೆ ತಂದರು.
- ಕಾರ್ಯಕ್ರಮಗಳ ಆಹ್ವಾನಪತ್ರಿಕೆ, ಬ್ಯಾನರ್, ಪ್ರಮಾಣಪತ್ರಗಳನ್ನು ಅಕಾಡೆಮಿಯಿಂದ ಸಿದ್ಧಪಡಿಸಿ ಕಳುಹಿಸುತ್ತಿದ್ದು, ಅದರ ಬದಲಾಗಿ ಆಯಾ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿಯೇ ಆಹ್ವಾನಪತ್ರಿಕೆ, ಬ್ಯಾನರ್‌ಗಳನ್ನು ಸದಸ್ಯ ಸಂಚಾಲಕರು ಸಿದ್ಧಪಡಿಸಿ, ದರಪಟ್ಟಿ, ಬಿಲ್ಲುಗಳನ್ನು ಸದಸ್ಯರು ಪಡೆದು ಸಲ್ಲಿಸಲು ಅವಕಾಶ ನೀಡಬೇಕೆಂದು ತಿಳಿಸಿದರು. ಈ ವಿಷಯದ ಬಗ್ಗೆ ರಿಜಿಸ್ಟ್ರಾರ್ ಅವರು ರಾಜ್ಯದ ಬೇರೆ ಬೇರೆ ಸ್ಥಳದಲ್ಲಿನ ದರಪಟ್ಟಿಗಳಿನ ದರಗಳು ವ್ಯತ್ಯಾಸವಾಗುವುದಾಗಿ, ಇದು ಆಡಿಟ್‌ನಲ್ಲಿ ಆಕ್ಷೇಪಣೆಯಾಗುತ್ತದೆ ಮತ್ತು ಸರ್ಕಾರಿ ಸುತ್ತೋಲೆ ಪ್ರಕಾರ ಮತ್ತು ಬೈಲಾ ಪ್ರಕಾರ ಕಾರ್ಯಕ್ರಮ ಅನುಷ್ಠಾನಗೊಳಿಸುವುದು ಮತ್ತು ವ್ಯವಸ್ಥೆ ಮಾಡುವುದು ರಿಜಿಸ್ಟ್ರಾರ್ ಅವರ ಕರ್ತವ್ಯವಾಗಿರುತ್ತದೆ ಹಾಗಾಗಿ ಸದಸ್ಯರು ಆಹ್ವಾನಪತ್ರಿಕೆ, ಬ್ಯಾನರ್ ಮಾಡಿಸಲು ಅವಕಾಶವಿರುವುದಿಲ್ಲ ಎಂದು ತಿಳಿಸಿದರು. ದಿನಾಂಕ 5-2-2020ರ ಸ್ಥಾಯಿಸಮಿತಿ ಸಭೆಯ ನಡಾವಳಿಯಲ್ಲಿರುವ ಪ್ರಸ್ತಾಪಿಸಿರುವ ವಿಷಯವನ್ನು ಸದಸ್ಯರುಗಳು ಜಂಟಿ ನಿರ್ದೇಶಕರ ಗಮನಕ್ಕೆ ತಂದರು. ಜಂಟಿ ನಿರ್ದೇಶಕರಾದ ಶ್ರೀ ಬಲವಂತರಾವ್ ಪಾಟೀಲ್ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿಯೇ ಆಹ್ವಾನಪತ್ರಿಕೆ, ಬ್ಯಾನರ್, ಪ್ರಮಾಣಪತ್ರಗಳನ್ನು ಆಸಕ್ತ ಸದಸ್ಯ ಸಂಚಾಲಕರು ದರಪಟ್ಟಿ ಪಡೆದು, ಮುದ್ರಿಸಿ ಬಿಲ್ಲುಗಳು ಮತ್ತು ದರಪಟ್ಟಿಯನ್ನು ರಿಜಿಸ್ಟ್ರಾರ್‌ಗೆ ಸಲ್ಲಿಸುವಂತೆ ತಿಳಿಸಿದರು. ದರಗಳು ಹೆಚ್ಚು ವ್ಯತ್ಯಾಸವಾದಲ್ಲಿ ಆಡಿಟ್‌ನಲ್ಲಿ ಆಕ್ಷೇಪವಾಗುವುದರಿಂದ, ಕೇಂದ್ರ ಸ್ಥಾನದಲ್ಲಿ ಪಡೆದ ದರಪಟ್ಟಿಗೆ ಸಮೀಪದಲ್ಲಿರುವಂತೆ ದರಗಳಿರಬೇಕೆಂದು ತಿಳಿಸಿದರು.

ದರಪಟ್ಟಿ ಕರೆದ ಪತ್ರವನ್ನು ಸದಸ್ಯ ಸಂಚಾಲಕರಿಗೆ ಕಾರ್ಯಕ್ರಮಕ್ಕೆ ಮುಂಚೆಯೇ ನೀಡಿದಲ್ಲಿ ಅವರಿಗೆ ದರಪಟ್ಟಿ ಅನುಕೂಲವಾಗುವುದಾಗಿ ಸದಸ್ಯರು ತಿಳಿಸಿದರು. ಕಾರ್ಯಕ್ರಮಕ್ಕೆ ಮುಂಚೆಯೇ ದರಪಟ್ಟಿಗಳನ್ನು ಸಂಗ್ರಹಿಸಿ ನೀಡುವಂತೆ ಈ ಹಿಂದೆಯೇ ಸದಸ್ಯ ಸಂಚಾಲಕರಿಗೆ ಮಾಹಿತಿ ನೀಡಿರುವ ಬಗ್ಗೆ ರಿಜಿಸ್ಟ್ರಾರ್ ಸಭೆಯ ಗಮನಕ್ಕೆ ತಂದರು. ದರಪಟ್ಟಿ ಕರೆದ ಪತ್ರವನ್ನು ಸದಸ್ಯ ಸಂಚಾಲಕರಿಗೆ ನೀಡಲು ರಿಜಿಸ್ಟ್ರಾರ್ ಸಮ್ಮತಿಸಿದರು.

- ಸದಸ್ಯರಾದ ಶ್ರೀ ಯಶವಂತ ಸರದೇಶಪಾಂಡೆಯವರು ಅಕಾಡೆಮಿಯಿಂದ ರಿಜಿಸ್ಟ್ರಾರ್ ಅವರಿಗೆ ವಾಹನ ಸೌಲಭ್ಯ ನೀಡುತ್ತಿದ್ದು, ಇದಕ್ಕಾಗಿ ತಿಂಗಳಿಗೆ ರೂ.30,000/- ಅಕಾಡೆಮಿ ಭರಿಸುತ್ತಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಈ ಸಂಬಂಧ ಸರ್ಕಾರಿ ಆದೇಶವಿದ್ದು, ನಿಯಮಾನುಸಾರ ನಿರ್ದೇಶಕರ ಅನುಮತಿ ಮೇಲೆ ಟೆಂಡರ್ ಕರೆದು ವಾಹನ ಪಡೆದಿರುವುದನ್ನು ಸಭೆಯ ಗಮನಕ್ಕೆ ತಂದರು. ಈಗಾಗಲೇ ಇದಕ್ಕಾಗಿ ಕ್ರಿಯಾಯೋಜನೆಯಲ್ಲಿ ಮೊತ್ತವನ್ನು ಮೀಸಲಿಟ್ಟಿದ್ದು, ಕಾರ್ಯನಿರ್ವಾಹಕರ ಹುದ್ದೆ ತಮ್ಮದಾಗಿದ್ದು, ಈ ಸಂಬಂಧ ಇಲಾಖಾ ಅಧಿಕಾರಿಗಳಿಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನ ಪಡೆಯುವ ಸೌಲಭ್ಯವಿದ್ದು, ಕ್ಲಾಸ್-1 ಉಪನಿರ್ದೇಶಕರ ದರ್ಜೆಯ 4 ಅಕಾಡೆಮಿಗಳ ರಿಜಿಸ್ಟ್ರಾರ್‌ಗಳು ವಾಹನ ಬಳಸುತ್ತಿರುವುದನ್ನು ತಿಳಿಸಿ, ಆದೇಶದ ಪ್ರತಿಯನ್ನು ಸಭೆಗೆ ನೀಡಿದರು. ಸದಸ್ಯರಾದ ಎಂ.ಕೆ.ಮಠ ಆಡಳಿತಾತ್ಮಕ ವಿಚಾರ ಸದಸ್ಯರಿಗೆ ಸಂಬಂಧಿಸಿದ್ದಲ್ಲ ಎಂಬ ನಿಲುವನ್ನು ವ್ಯಕ್ತಪಡಿಸಿದರು.
- ಅಕಾಡೆಮಿಯಲ್ಲಿ ಸ್ವೀಕೃತವಾಗುವ ಎಲ್ಲಾ ಪತ್ರಗಳನ್ನು ಅಧ್ಯಕ್ಷರ ಗಮನಕ್ಕೆ ತಂದು, ಆದ್ಯತೆಯ ಮೇರೆಗೆ ಸಭೆಯಲ್ಲಿ ಮಂಡಿಸಲು ಸಭೆ ಸಮ್ಮತಿಸಿತು.

ಸಭೆಗೆ ಬಂದ ಪತ್ರಗಳು

1. ಶ್ರೀ ಆರ್.ಎಂ.ಸಿದ್ದೇಶ್ ಗೌಡ್ರು, ಬಳ್ಳಾರಿ ಜಿಲ್ಲೆ ಇವರು ವೈದ್ಯಕೀಯ ವೆಚ್ಚಕ್ಕಾಗಿ ಮನವಿ ಸಲ್ಲಿಸಿರುತ್ತಾರೆ.
   ಮನವಿಯನ್ನು ಪರಿಶೀಲಿಸಿದ ಸಭೆಯು ವೈದ್ಯಕೀಯ ವೆಚ್ಚಕ್ಕೆ ಅವಕಾಶವಿರುವುದಿಲ್ಲವೆಂದು ಸಭೆ ತೀರ್ಮಾನಿಸಿತು.

2. ನಮ ತುಳುವರ್ ಕಲಾ ಸಂಘಟನೆ(ರಿ),ಉಡುಪಿ ಜಿಲ್ಲೆ ಇವರಿಗೆ ನಾಟಕ ತಂಡವನ್ನು ಕಳುಹಿಸುವ ಬಗ್ಗೆ.
   ಮನವಿಯನ್ನು ಪರಿಶೀಲಿಸಿದ ಸಭೆಯ ನಾಟಕ ತಂಡದ ಆಯ್ಕೆಯನ್ನು ಸಂಸ್ಥೆಗೆ ಬಿಡಲು ಮತ್ತು ಅವರು ಕರೆಸುವ ತಂಡಕ್ಕೆ ರೂ.35,000/- ನೀಡಲು ಸಭೆ ಸಮ್ಮತಿಸಿತು.

3. ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ,ಬೆಂಗಳೂರು ಇವರು ನಾಟಕದ ಸ್ಕ್ರಿಪ್ಟ್ ಮತ್ತು ಬೀದಿ ನಾಟಕದ ತಯಾರಿಗೆ ಅಂದಾಜು ವೆಚ್ಚ ಸಂಬಂಧದ ಪತ್ರವನ್ನು ನಿರ್ದೇಶಕರು ಅಕಾಡೆಮಿಗೆ ಕಳುಹಿಸಿರುತ್ತಾರೆ.
   ಮನವಿಯನ್ನು ಪರಿಶೀಲಿಸಿದ ಸಭೆಯು ಸ್ಕ್ರಿಪ್ಟ್ ರಚನೆ ಹಾಗೂ ಬೀದಿ ನಾಟಕದ ಅಂದಾಜು ವೆಚ್ಚ ಕೇಳಿದ್ದು, ಮುಂದಿನ ಸಭೆಯಲ್ಲಿ ಚರ್ಚಿಸಿ ತಿಳಿಸಲಾಗುವುದು.

4. ವೀರು ಥಿಯೇಟರ್ ಟ್ರಸ್ಟ್, ಬೆಳಗಾವಿ ಇವರು ಗೊಂಬೆ ನಾಟಕದ ರಂಗತರಬೇತಿ ಶಿಬಿರಕ್ಕೆ ಸಹಾಯಧನದ ಬಗ್ಗೆ ಮನವಿ ಸಲ್ಲಿಸಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಗೊಂಬೆ ನಾಟಕದ ರಂಗತರಬೇತಿಗೆ ನಾಟಕ ಅಕಾಡೆಮಿಯಲ್ಲಿ ಅವಕಾಶವಿರುವುದಿಲ್ಲವೆಂದು ತೀರ್ಮಾನಿಸಿತು.

5. ರಂಗವಾಹಿನಿ, ಚಾಮರಾಜನಗರ ಇವರು ವಿಶ್ವರಂಗಭೂಮಿ ದಿನಾಚರಣೆ-2020 ಕಾರ್ಯಕ್ರಮಕ್ಕೆ ಆರ್ಥಿಕ ಸಹಾಯ ಕೋರಿರುತ್ತಾರೆ.
ಪತ್ರವನ್ನು ಪರಿಶೀಲಿಸಿದ ಸಭೆಯು ಇದರ ತೀರ್ಮಾನವನ್ನು ಸದಸ್ಯರಾದ ಶ್ರೀಮತಿ ರಾಧ ಕೊಡಗು ಅವರಿಗೆ ನೀಡಲು ಸಭೆ ಸಮ್ಮತಿಸಿತು.

6. ಸಗರನಾಡು ಸೇವಾ ಪ್ರತಿಷ್ಠಾನ(ರಿ)ಯಾದಗಿರಿ ಇವರು ವಿಶ್ವರಂಗಭೂಮಿ ದಿನಾಚರಣೆ ಕಾರ್ಯಕ್ರಮ ಆಯೋಜಿಸುತ್ತಿದ್ದು ಸಹಕಾರ ಹಾಗೂ ಅನುದಾನ ನೀಡಲು ಮನವಿ ಸಲ್ಲಿಸಿರುತ್ತಾರೆ
ಪತ್ರವನ್ನು ಪರಿಶೀಲಿಸಿದ ಸಭೆಯು ಇದರ ತೀರ್ಮಾನವನ್ನು ಸದಸ್ಯರಾದ ಶ್ರೀ ಪ್ರಭುದೇವ ಕಪ್ಪಗಲ್ ಅವರಿಗೆ ನೀಡಲು ಸಭೆ ಸಮ್ಮತಿಸಿತು.

7. ಅಭಿನಯ ಭಾರತಿ(ರಿ)ಧಾರವಾಡ ಇವರು ಧಾರವಾಡದಲ್ಲಿ ಮಾರ್ಚ್ 20 ರಿಂದ 26ರವರೆಗೆ ಪ್ರಸಾಧನ ಶಿಬಿರ ಹಮ್ಮಿಕೊಂಡಿದ್ದು, ಸುಮಾರು 60,000/- ವೆಚ್ಚವಾಗುವುದೆಂದು ಇದರ ಸಂಪೂರ್ಣ ವೆಚ್ಚ ಅಥವಾ ಸ್ಥಳೀಯ ಸಂಘಟನೆ ಭರಿಸಲು ಕೋರಿದ್ದಾರೆ.
ಪತ್ರವನ್ನು ಪರಿಶೀಲಿಸಿದ ಸಭೆಯು ಮುಂದಿನ ದಿನಗಳಲ್ಲಿ ಈ ಮನವಿಯನ್ನು ಪರಿಗಣಿಸಬಹುದೆಂದು ತೀರ್ಮಾನಿಸಿತು.

8. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ ಇವರು ನಾಟಕೋತ್ಸವಕ್ಕೆ ಪ್ರಾಯೋಜನೆ ಕೋರಿ ಮನವಿ ಸಲ್ಲಿಸಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಈಗಾಗಲೇ ಸರ್ಕಾರದ ಅನುದಾನ ಪಡೆಯುವ ಕನ್ನಡ ಸಾಹಿತ್ಯ ಪರಿಷತ್ತು ಮತ್ತು ರಂಗಾಯಣಗಳಿಗೆ ತಂಡದ ಸಂಭಾವನೆ, ಕಾರ್ಯಕ್ರಮ ನೀಡದಿರಲು ಸಭೆ ನಿರ್ಧರಿಸಿತು.

9. ರಾಜಣ್ಣ ಜೇವರಗಿ, ಅಧ್ಯಕ್ಷರು, ವಿಶ್ವಜ್ಯೋತಿ ಪಂಚಾಕ್ಷರ ನಾಟ್ಯಸಂಘ, ಜೇವರಗಿ ಇವರು ಶಿಷ್ಯವೇತನಕ್ಕೆ ಇನ್ನೊಬ್ಬರನ್ನು ಸಂಸ್ಥೆಗೆ ಕಳಿಸುವ ಕುರಿತು ಮನವಿ ಸಲ್ಲಿಸಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಈ ಯೋಜನೆಯು ಡಿಸೆಂಬರ್ -2019 ರಿಂದ ಪ್ರಾರಂಭವಾಗಿರುವುದರಿಂದ ಪ್ರಸ್ತುತ ಇನ್ನೊಬ್ಬರನ್ನು ಆಯ್ಕೆ ಮಾಡಿ ಕಳುಹಿಸುವುದು ಸೂಕ್ತವಲ್ಲವೆಂದು ತೀರ್ಮಾನಿಸಿತು.

10. ದೊಡ್ಡಬಳ್ಳಾಪುರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ದೊಡ್ಡಬಳ್ಳಾಪುರ ಇವರು ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ನಾಟಕ ಅಕಾಡೆಮಿಯಿಂದ ನಾಟಕ ತಂಡ ಕಳುಹಿಸಲು ಕೋರಿ ಮನವಿ ಸಲ್ಲಿಸಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಸಾಹಿತ್ಯ ಸಮ್ಮೇಳನಕ್ಕೆ ಆಯ್ಕೆ ಮಾಡಲಾದ ಒಂದು ತಂಡಕ್ಕೆ ಸಂಭಾವನೆಯಾಗಿ ರೂ.30,000/- ಪಾವತಿಸಲು, ಈ ಮೊತ್ತವನ್ನು ವೃತ್ತಿರಂಗಭೂಮಿ ಶಿಷ್ಯವೇತನ ಶೀರ್ಷಿಕೆಯಲ್ಲಿ ಭರಿಸಲು ಸಭೆ ತೀರ್ಮಾನಿಸಿತು.

11. ರಾಷ್ಟ್ರೀಯ ಕನ್ನಡ ಸಿರಿ ಸಮ್ಮೇಳನ-2020 ಅನಂತಪುರ ಇವರು 'ರಾಷ್ಟ್ರೀಯ ಕನ್ನಡ ಸಿರಿ ಸಮ್ಮೇಳನದಲ್ಲಿ ಅಕಾಡೆಮಿ ವತಿಯಿಂದ ಕಾರ್ಯಕ್ರಮ ನೀಡಲು ಕೋರಿದ್ದಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಮುಂದಿನ ದಿನಗಳಲ್ಲಿ ಈ ಮನವಿಯನ್ನು ಪರಿಗಣಿಸಬಹುದೆಂದು ತೀರ್ಮಾನಿಸಿತು.

12. ಹಿರಿಯ ಕಲಾವಿದ ಅಶೋಕ ಮುಕಾರ ಅರ್ಕಸಾಲಿಯವರು ಅಕಾಡೆಮಿ ಪ್ರಶಸ್ತಿ ಸಂಬಂಧ ಇಲಾಖಾ ಸಚಿವರಿಗೆ ಪತ್ರ ಬರೆದಿರುವ ಮನವಿಯನ್ನು ನಿರ್ದೇಶಕರು ಅಕಾಡೆಮಿಗೆ ಕಳುಹಿಸಿರುತ್ತಾರೆ.
ಮನವಿಯನ್ನು ಪರಿಶೀಲಿಸಿದ ಸಭೆಯು ಅಕಾಡೆಮಿ ಪ್ರಶಸ್ತಿ ಆಯ್ಕೆ ಪ್ರಕ್ರಿಯೆ ಮುಗಿದಿರುವುದಾಗಿಯೂ ಅವಕಾಶವಿಲ್ಲವೆಂದು ತೀರ್ಮಾನಿಸಿತು ಹಾಗೂ ಧಾರವಾಡದ ಸದಸ್ಯರಾದ ಶ್ರೀ ಶಿವಪ್ಪ ಭರಮಪ್ಪ ಅದರಗುಂಚಿ ಅವರು ಇದು ನಕಲಿ ಪತ್ರವೆಂಬುದನ್ನು ಸಭೆಯ ಗಮನಕ್ಕೆ ತಂದರು.

13. ರಂಗವಿಜಯ, ಕೋಲಾರ ಇವರು ವಿಶ್ವರಂಗಭೂಮಿ ದಿನಾಚರಣೆಗೆ ಅಕಾಡೆಮಿಯಿಂದ ಅವಕಾಶ ನೀಡಲು ಕೋರಿರುತ್ತಾರೆ.
ಪತ್ರವನ್ನು ಪರಿಶೀಲಿಸಿದ ಸಭೆಯು ಸದಸ್ಯರಾದ ಶ್ರೀ ಎಂ.ಎಸ್.ಗುಣಶೀಲನ್ ಅವರ ಒಪ್ಪಿಗೆ ಮೇಲೆ ಪ್ರಸ್ತುತ ಸಂಸ್ಥೆಗೆ ಕಾರ್ಯಕ್ರಮ ನೀಡಲು ಸಮ್ಮತಿಸಿತು.

14. ಅಮರನಾಥ್ ಯೋಗಕೇಂದ್ರ, ದೊಡ್ಡಬಳ್ಳಾಪುರ ಇವರು ವಿಶ್ವರಂಗಭೂಮಿ ದಿನಾಚರಣೆ ಆಚರಿಸಲು ಅವಕಾಶ ಕೋರಿ ಮನವಿ ಸಲ್ಲಿಸಿರುತ್ತಾರೆ.
ಪತ್ರವನ್ನು ಪರಿಶೀಲಿಸಿದ ಸಭೆಯು ಸದಸ್ಯರಾದ ಶ್ರೀ ಎಂ.ಎಸ್.ಗುಣಶೀಲನ್ ಅವರ ಒಪ್ಪಿಗೆ ಮೇಲೆ ಪ್ರಸ್ತುತ ಸಂಸ್ಥೆಗೆ ಕಾರ್ಯಕ್ರಮ ನೀಡಲು ಸಮ್ಮತಿಸಿತು.

ರಿಜಿಸ್ಟ್ರಾರ್ ವಂದನೆ ಸಲ್ಲಿಸುವುದರ ಮೂಲಕ ಸಭೆ ಮುಕ್ತಾಯವಾಯಿತು

07.03.2020
(ಪ್ರೊ.ಭೀಮಸೇನ.ಆರ್)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

7/3/2020
(ಡಾ.ಶೈಲಜಾ ಎ.ಸಿ)
ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ